ಈ ದಿನ ದಿಃ 13-06-2024 ರಂದು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ. 1,3 ಮತ್ತು 4 ಪರ ಶ್ರೀ ಎಸ್.ಬಿ.ಎಂ. ವಕೀಲರಿಂದಃ

ಪ್ರಸ್ತುತ ದಾವೆಯನ್ನು ಸರ್ವೆ ನಂ . 91/1 ವಿಸ್ತೀರ್ಣ 3 ಎಕರೆ 14 ಗುಂಟೆ, 79/15, 79/19 ಜಮೀನುಗಳಿಗೆ ಮತ್ತು ಮನೆ ನಂ.280, 274, ಕ್ಕೆ ಸಂಬಂಧಿಸಿದಂತೆ ಹಾಕಿರುತ್ತೇನೆ. ಸರ್ವೆ ನಂ . 91/1 ರ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂದರೆ ನನಗೆ ಗೊತ್ತಿಲ್ಲ . ಪ್ರಸ್ತುತ ದಾವೆಯನ್ನು ದಾಖಲಿಸಿದ ನಂತರ ಸರ್ವೆ ನಂ.91/1 ರ ಜಮೀನನ್ನು ಕೂಡಿಸಿರುತ್ತಾರೆ. ಅದರ ಅರ್ಥ 2009 ರಲ್ಲಿ ಕೂಡಿಸಿರುತ್ತಾರೆಂದರೆ ಸರಿ . ಆ ಕೂಡಿಸುವಿಕೆಯ ಬಗ್ಗೆ ನನಗೆ ಗೊತ್ತಿರಲಿಲ್ಲ. ಸರ್ವೆ ನಂ. 79/15 ವಿಸ್ತೀರ್ಣ 2 ಗುಂಟೆ ಮತ್ತು 79/19 ರ ವಿಸ್ತೀರ್ಣ 30 ಗುಂಟೆ ಇರುತ್ತದೆ. ಅದೇ ರೀತಿ ಮನೆಗಳಾದ 280 ಪೂರ್ವ ಪಶ್ಚಿಮ 20 ಅಡಿ, ದಕ್ಷಿಣ ಉತ್ತರ 12.5 ಅಡಿ ಮತ್ತು 274 ಪೂರ್ವ ಪಶ್ಚಿಮ 15 ಅಡಿ ಮತ್ತು ದಕ್ಷಿಣ ಉತ್ತರ 15 ಅಡಿ ಇರುತ್ತದೆ. ಸದರಿ ವಿಸ್ತೀರ್ಣವನ್ನು ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುತ್ತೇನೆ. ಸದರಿ ಹೊಲ ಮತ್ತು ಮನೆಯ ಕಿಮ್ಮತ್ತು ಎಷ್ಟು ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ವಕೀಲರಿಗೂ ಸಹ ಸದರಿ ಆಸ್ತಿಗಳ ಕಿಮ್ಮತ್ತನ್ನು ಹೇಳಿರುವುದಿಲ್ಲ. ದಾವಾ ಆಸ್ತಿಗಳು ನನಗೆ ನನ್ನ ಅಜ್ಜನಿಂದ ಬಂದಿರುತ್ತವೆ. ಈ ಬಗ್ಗೆ ಉತಾರ/ಪಹಣಿಗಳನ್ನು ಹಾಜರು ಮಾಡಿರುತ್ತೇನೆ.

ಕೃಷ್ಣಾ ರವರ ಮಗನ ಹೆಸರು ಅಶೋಕ ಎಂದರೆ ಸರಿ . ಒಂದು ವರ್ಷದ ಹಿಂದೆ ಅಶೋಕ ಮೃತ ಪಟ್ಟಿರುತ್ತಾರೆಂದರೆ ಸರಿ. ಪ್ರತಿವಾದಿ ನಂ. 1 ಎ ರಿಂದ 1 ಎಫ್ ರವರು ಅಶೋಕ ರವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ನನ್ನ ತಂದೆಯ ಹೆಸರು ಅಂತು. ನನ್ನ ತಂದೆಗೆ ನಾನು ಒಬ್ಬನೇ ಮತ್ತು ಮೂರು ಜನ ಹೆಣ್ಣು ಮಕ್ಕಳು ಇರುತ್ತೇವೆ. ಕುಂದನ ಎನ್ನುವವರು ನನ್ನ ತಂಗಿ. ಆಕೆಗೆ ಬಾಡ ಗ್ರಾಮಕ್ಕೆ ವಿವಾಹ ಮಾಡಿ ಕೊಟ್ಟಿರುತ್ತೇವೆ. ಈಗ ಆಕೆ ಮೃತಪಟ್ಟಿರುತ್ತಾಳೆ. ಆಕೆಯ ಮಕ್ಕಳ ಹೆಸರು ಶಂಕರ ಮತ್ತು ಕಮಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಮಲ ನನ್ನ ಪತ್ತಿಯಾಗುತ್ತಾರೆಂದು ಹೇಳುತ್ತಾರೆ. ಪ್ರಸ್ತುತ ದಾವೆಯಲ್ಲಿ ಶಂಕರ ಹಾಗೂ ಕಮಲಾಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಪ್ರಸ್ತುತ ದಾವೆ ದಾಖಲಿಸುವಾಗ ಶಂಕರ ಮತ್ತು ಕಮಲಾ ಇರುವ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ಅವರಿಗೆ ನಾನು ಉದ್ದೇಶಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ ಅಲ್ಲ.

ಪ್ರತಿವಾದಿ ನಂಃ 10 ರವರು ಕಲ್ಲು ರವರ ಪತ್ನಿಯಾಗುತ್ತಾರೆ . ಪ್ರತಿವಾದಿ ನಂ. 10 ರವರ ರವರ ಮಗಳ ಹೆಸರು ಲಕ್ಷ್ಮೀ ಅಲಿಯಾಸ ಕಾಶಿಬಾಯಿ. ಕಾಶಿಬಾಯಿ ರವರಿಗೆ ಮಂಗಳೂಳಿಗೆ ವಿವಾಹ ಮಾಡಿ ಕೊಟ್ಟಿರುತ್ತೇವೆ. ಸುಬ್ಬರಾವ ಮತ್ತು ದ್ವಾರ್ವಕಾಬಾಯಿ ನನಗೆ ಕಾಕಾ ಮತ್ತು ಕಾಕು ಆಗುತ್ತಾರೆ. ಅವರಿಗೆ ಮಕ್ಕಳು ಇರುವುದಿಲ್ಲ ಮತ್ತು ಅವರು ಮೃತಪಟ್ಟಿರುತ್ತಾರೆ. ನನ್ನ ಕುಟುಂಬ ದೊಡ್ಡದಾಗಿರುವುದರಿಂದ ನಾವು ಬಾಡಿಗೆ ಮನೆ ಮತ್ತು ಸ್ವಂತ ಮನೆಯಾದ ನಂ.1001 ರಲ್ಲಿ ವಾಸವಿದ್ದೇವೆ. ಬಾಡಿಗೆ ಮನೆಯ ವಿಪಿಸಿ ನಂಬರ ಹೇಳಲಾಗುವುದಿಲ್ಲ. ಸದರಿ ಸ್ವಂತ

ಮನೆಯನ್ನು ಕಟ್ಟಿ 20 ವರ್ಷ ಆಗಿರುತ್ತವೆ. ನನ್ನ ಕಾಕಾಗಳಾದ ಕಲ್ಲು ಮೃತ ಪಟ್ಟಿ 5-6 ವರ್ಷ, ಕೃಷ್ಣ ಮೃತ ಪಟ್ಟು 30 ವರ್ಷ, ಮಲ್ಲಪ್ಪ ಮೃತ ಪಟ್ಟು 30 ವರ್ಷ, ಸುಬ್ಬರಾವ ಮೃತಪಟ್ಟು 40 ವರ್ಷ ಮತ್ತು ನನ್ನ ತಂದೆ 1999 ರಲ್ಲಿ ಮೃತಪಟ್ಟಿರುತ್ತಾರೆ.

ಮೃತ ಪ್ರತಿವಾದಿ ನಂ. 1 ರವರು ಮನೆ ನಂ. 280 ಮತ್ತು 274 ರಲ್ಲಿ ವಾಸವಿದ್ದರು. ನಾವು ಸಹ ಅವರ ಜೊತೆಯಲ್ಲಿ ವಾಸವಿದ್ದೆವು. ಪ್ರತಿವಾದಿ ನಂ. 1 ರವರು ಚಿಕ್ಕ ವಯಸ್ಸಿನಿಂದಲೇ ನಮ್ಮ ಜೊತೆಯಲ್ಲಿ ವಾಸವಿದ್ದಾರೆ. ನಮ್ಮ ಮನೆತನದ ರೇಶನ್ ಕಾರ್ಡ ಮತ್ತು ಆಧಾರ್ ಕಾರ್ಡ ಸೇಪರೆಟ್ ಇವೆ. ಅದೇ ರೀತಿ ಪ್ರತಿವಾದಿ ನಂ. 1 ರವರ ಮತ್ತು ಅವರು ಮಕ್ಕಳ ರೇಶನ್ ಕಾರ್ಡ ಮತ್ತು ಆಧಾರ್ ಕಾರ್ಡ ಸೇಪರೆಟ್ ಇವೆ. ಅದೇ ರೀತಿ ಮಲ್ಲು ಮತ್ತು ಕಲ್ಲು ರವರು ರೇಶನ್ ಕಾರ್ಡ ಮತ್ತು ಆಧಾರ್ ಕಾರ್ಡ ಸೇಪರೆಟ್ ಇವೆ . ನಾವು ಬೇರೆ ವಾಸವಿದ್ದು 20-25 ವರ್ಷಗಳಾಗಿವೆ. ಮೊದಲಿನಿಂದಲೂ ನಮ್ಮ ಮನೆ ವ್ಯವಹಾರ ನಾನು ಮತ್ತು ನಮ್ಮ ಕಾಕಗಳ ಮನೆ ವ್ಯವಹಾರಗಳನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ ನಂ. 1 ನನಗಿಂತ ದೊಡ್ಡವರು ಇರುತ್ತಾರೆ. ನಮ್ಮ ನಮ್ಮ ಮನೆಗಳ ತೆರಿಗೆಗಳನ್ನು ನಾವೇ ತುಂಬುತ್ತೇವೆಂದರೆ ಸಾಕ್ಷಿಯು ಎಲ್ಲರೂ ಕೂಡಿ ತುಂಬುತ್ತೇವೆಂದು ಉತ್ತರಿಸುತ್ತಾರೆ . ಆ ಬಗ್ಗೆ ರಸೀದಿಗಳು ಇವೆ ಆದರೆ ಹಾಜರು ಮಾಡಿಲ್ಲ. ಪ್ರತಿವಾದಿ ನಂ. 1 ರವರು ಮತ್ತು ನಾವು ಬೇರೆ ಬೇರೆ ತೆರಿಗೆಗಳನ್ನು ತುಂಬುತ್ತಿರುವ ಕಾರಣ ರಸೀದಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ ಅಲ್ಲ . ಸದರಿ ತೆರಿಗೆ ರಸೀದಿಗಳನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ.

ಪ್ರತಿವಾದಿ ನಂ.7 ರವರು ಆಸ್ತಿ ನಂ . 280 ಕ್ಕೆ ಸಂಬಂಧಿಸಿದಂತೆ ಅಸಲು ದಾವೆ ನಂಃ 36/2010 ದಾಖಲಿಸಿರುತ್ತಾರೆಂದರೆ ಸರಿ. ಪ್ರತಿವಾದಿ ನಂ. 1 ಇವರು ಆಗ ಅಲ್ಲೇ ಮನೆ ಕಟ್ಟುತ್ತಿದ್ದ ಕಾರಣ ಪ್ರತಿವಾದಿ ನಂ. 7 ರವರು ಆ ದಾವೆ ಹಾಕಿರುತ್ತಾರೆ. ಪ್ರತಿವಾದಿ ನಂ. 1 ರವರು ಆಸ್ತಿ ನಂ. 280 ರಲ್ಲಿ ಮನೆ ಕಟ್ಟಿ ವಾಸವಿರುತ್ತಾರೆ ಎಂದರೆ ಸಾಕ್ಷಿ ಬೇಕಾಯ್ದೆ ಶೀರ ಕಟ್ಟಿರುತ್ತಾರೆಂದು ಉತ್ತರಿಸುತ್ತಾರೆ . ಅಸಲು ದಾವೆ ನಂ.36/2010 ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ದಾಖಲಿಸಲು ಪ್ರತಿವಾದಿ ನಂ. 7 ರವರಿಗೆ ನಾನೇ ಹೇಳಿರುತ್ತೇನೆಂದರೆ ಸರಿ. ಪ್ರತಿವಾದಿ ನಂ. 1 ರವರು ಅವರಿಗೆ ಬಂದ ಪಾಲಿನಲ್ಲಿ ಮನೆ ಕಟ್ಟಿರುತ್ತಾರೆಂದರೆ ಸರಿ ಅಲ್ಲ . 2010 ರಿಂದ ಇಲ್ಲಿಯವರೆಗೆ ಪ್ರತಿವಾದಿ ನಂ. 1 ಮತ್ತು ಅವರ ಮಕ್ಕಳು ಅದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ನಾವು ಎಲ್ಲರೂ ಅಲ್ಲೇ ಇದ್ದೆವೆ ಎಂದು ನುಡಿಯುತ್ತಾರೆ . ನಾನು ಸದರಿ ಮನೆಯಲ್ಲಿ ವಾಸವಿದ್ದೆವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

ನನ್ನ ತಂದೆ ಮತ್ತು ನನ್ನ ಕಾಕ ನನ್ನ ಜನ್ಮ ಪೂರ್ವ ಆಗುವುದಕ್ಕಿಂತ ಪೂರ್ವದಿಂದ ಬೇರೆ ಬೇರೆ ಇದ್ದಾರೆಂದರೆ ಕೂಡಿಇದ್ದಾರೆಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಿಂದೆ ಜೀವಂತ ಇರುವ ಸಮಯದಿಂದ ದುಡಿದು ತಿನ್ನಲು ಬೇರೆ ಬೇರೆ ಇರುತ್ತೆವೆಂದು ಉತ್ತರಿಸುತ್ತಾರೆ. ಪ್ರತಿವಾದಿ ನಂ. 1 ಮತ್ತು ಅವರ ತಂದರೆ ನನ್ನ ಜನ್ಮ

ಪೂರ್ವದಿಂದ ಬೇರೆ ಬೇರೆ ಇದ್ದೆವೆಂದರೆ ಸರಿ . ಸಾಕ್ಷಿ ಮುಂದುವರೆದು ಮೂರು ಜನರು ದುಡಿದು ತಿನ್ನಲು ಹೊರಗಡೆ ಹೋಗಿರುತ್ತಾರೆ. ದ್ವಾರಕಾಬಾಯಿ ಪ್ರತಿವಾದಿ ನಂ.1 ರವರ ಜೊತೆ ವಾಸವಿದ್ದರು ಎಂದರೆ ಸರಿ ಅಲ್ಲ , ಬೋಜ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ಇದ್ದರು. ಬಾಡಿಗೆ ಮನೆ ನಂಬರ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದ್ವಾರಕಾಬಾಯಿ ರವರಿಗೆ ಪ್ರತಿವಾದಿ ನಂ. 1 ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ ಅಲ್ಲ. ನಾವು ನೋಡಿಕೊಳ್ಳುತ್ತಿದ್ದೆವು. ಆ ಕಾರಣಕ್ಕಾಗಿ ದ್ವಾರಕಾಬಾಯಿ ರವರು ಪ್ರತಿವಾದಿ ನಂ. 1 ರವರಿಗೆ ದಿಃ 05-11-1994 ರಂದು ಆಸ್ತಿಗಳ ಬಗ್ಗೆ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿ ಅಲ್ಲ. ಸದರಿ ಮೃತ್ಯು ಪತ್ರದಂತೆ ದಾವಾ ಆಸ್ತಿಗಳಾದ 280 ಮತ್ತು 274 ಪ್ರತಿವಾದಿ ನಂ. 1 ವರ ಹೆಸರಿನಲ್ಲಿವೆ ಎಂದರೆ ಹೆಸರು ದಾಖಲಿದೆ ಆದರೆ ಮೃತ್ಯು ಪತ್ರದಂತೆ ಅಲ್ಲ. ಸದರಿ ಅಸ್ತಿಗಳಿಗೆ ಪ್ರತಿವಾದಿ ನಂ . 1 ರವರ ಹೆಸರು ನಾನು ಹುಟ್ಟಿದ ದಿನದಿಂದ ಇವೆ. ಮೃತ್ಯು ಪತ್ರದಂತೆ ಪ್ರತಿವಾದಿ ನಂ. 1 ರವರ ಹೆಸರು ಆಸ್ತಿ ನಂ. 280 ಗೆ ದಾಖಲಿದೆ ಎಂದರೆ ಸರಿ ಅಲ್ಲ . ಆ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಠರಾವು ಆಗಿದೆ ಎಂದರೆ ಸರಿ ಅಲ್ಲ. ಈ ವಿಚಾರವಾಗಿ ತಾಲೂಕಾ ಪಂಚಾಯತಿಯಲ್ಲಿ ಅಥವಾ ನ್ಯಾಯಾಲಯದಲ್ಲಿ ತಕರಾರು ಮಾಡಿದ್ದಿರಾ ಎಂದರೆ ಸಾಕ್ಷಿಯು ಪ್ರಸ್ತುತ ದಾವೆಯಲ್ಲಿ ದಾಖಲಿಸಿದ್ದೇವೆಂದು ಉತ್ತರಿಸುತ್ತಾರೆ.

ಅದೇ ರೀತಿ ಸರ್ವೆ ನಂಃ 91/1, 79/15 ಮತ್ತು 79/19 ಜಮೀನುಗಳಿಗೆ ಮೃತ್ಯು ಪತ್ರದಂತೆ ಹೆಸರು ದಾಖಲು ಮಾಡಲು ಪ್ರತಿವಾದಿ ನಂ . 1 ರವರು ಅರ್ಜಿ ನೀಡಿದ್ದರು ಎಂದರೆ ಸರಿ . ಅದಕ್ಕೆ ನಾನು ತಕರಾರು ದಾಖಲಿಸಿರುತ್ತೇನೆ. ದಿವಾಣಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ವಿವಾದ ತೀರ್ಮಾನಿಸಿಕೊಳ್ಳಲು ಆದೇಶವಾಗಿದೆ ಎಂದರೆ ಸರಿ. ದ್ವಾರಕಾಬಾಯಿ ಮೃತ್ಯು ಪತ್ರ ಬರೆದ ವಿಚಾರ ನನಗೆ ಗೊತ್ತು ಎಂದರೆ ಸಾಕ್ಷಿ ಮೃತ್ಯು ಪತ್ರ ಮಾಡಿಲ್ಲ. ಮೃತ್ಯು ಪತ್ರ ಮಾಡಿದ ದಿನದಿಂದ ಇಲ್ಲಿಯವರೆಗೆ ಸದರಿ ಆಸ್ತಿಗಳು ಮತ್ತು ಅವರ ತಂದೆ ಪಾಲಿಗೆ ಬಂದಿರುವ ಆಸ್ತಿಗಳು ಪ್ರತಿವಾದಿ ನಂ . 1 ರವರ ಕಬ್ಜೆಯಲ್ಲಿ ಇವೆ ಎಂದರೆ ಸರಿ ಅಲ್ಲ . ದ್ವಾರಕಾಬಾಯಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಮಾಡಿರುತ್ತೇನೆಂದರೆ ಸರಿ ಅಲ್ಲ. ದ್ವಾರಕಾಬಾಯಿಯ ಆಸ್ತಿಗಳಿಗೆ ಹಾಗೂ ನಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಆಲಿಸಿ ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲನ್ನು ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.